

# ವಯಂಕಾರ

ಅಹಂಕಾರದಷ್ಟೇ ವಯಂಕಾರವೂ ಭಯಂಕರ ಎನ್ನುತ್ತದೆ ತಲವಕಾರ. ತಲವಕಾರೋಪನಿಷತ್ತಿನ ಉಪಾಖ್ಯಾನವೊಂದು ದೇವತೆಗಳೊಳಗೆ ಅವತರಿಸಿದ ವಯಂಕಾರದ ಚೊಗರನ್ನು, ಚಿಕ್ಕ ಚಿಗುರನ್ನು, ಕಿಸಲಯವನ್ನು ಚುರುಕಾಗಿ ಚೊಕ್ಕವಾಗಿ ಚಿವುಟಿದ ವಿಚಾರವನ್ನು ಚುಟುಕಾಗಿ ಚೆಂದವಾಗಿ ಚಿತ್ರಿಸುತ್ತದೆ.

ಅದೊಂದು ದೇವದಾನವರೊಳಗೆ ನಡೆದ ಮಹಾಯುದ್ಧ. ಈ ಬಾರಿ ಗೆಲುವು ದೇವತೆಗಳದ್ದು.

ಯಾಕೆಂದರೆ ಭಗವಾನ್ ಮಹಾವಿಷ್ಣು ದೇವತೆಗಳೊಳಗಿದ್ದು ದೇವತೆಗಳಿಗೆ ಗೆಲುವು ತಂದುಕೊಟ್ಟ.

ಆದರೆ ಗೆದ್ದ ಮೇಲೆ ದೇವತೆಗಳೆಲ್ಲರೂ ತಾವೇ ಗೆದ್ದದ್ದು ಎಂದು ನೆಗೆದು ಬಿದ್ದರು. ಸ್ವತಃ ಇಂದ್ರನೂ ಕೂಡಾ.

ಎಷ್ಟೆಂದರೂ ಇಂದ್ರ ಅಹಂಕಾರ ತತ್ತ್ವಾಭಿಮಾನಿ ರುದ್ರದೇವರ ತನಯ ತಾನೇ? ಅರ್ಜುನನಾಗಿರುವಾಗ ಮತ್ತೆ ಗೋವರ್ಧನಾದಿ ಪ್ರಸಂಗಗಳಲ್ಲಿ ಹಾಗೆಯೇ ಆಗಾಗ್ಗೆ ಇಂದ್ರನಿಗೆ ಹೀಗಾಗುವುದುಂಟು.

ಸರಿ, ಎಲ್ಲರೂ ಇಂದ್ರಾದಿ ದೇವತೆಗಳಲ್ಲಿ ತಮ್ಮನ್ನು ತಾವೇ ಅಮಹೀಯಂತ. ಎಲ್ಲರ ಮುಖವೂ ಬಿಗಿಯತೊಡಗಿತು. ಬೀಗತೊಡಗಿತು.

ಬೆಳವಣಿಗೆಯನ್ನು ಭಗವಾನ್ ಮಹಾವಿಷ್ಣು ಗಮನಿಸಿದ. ಅವರೆಲ್ಲಾ ನೋಡುತ್ತಿದ್ದಂತೆಯೇ ದೂರದಲ್ಲಿ ಅಪರಿಚಿತ ಯಕ್ಷರೂಪದಲ್ಲಿ ಚೋದ್ಯವಾಗಿ ಗುಮ್ಮನಂತೆ ಮೆಲ್ಲನಂತೆ ಕಾಣಿಸಿಕೊಂಡ.

ಯಾರಿದು? ಏನಿದು? ಯಕ್ಷ ಯಕ್ಷಪ್ರಶ್ನೆಯಾದ ದೇವತೆಗಳಿಗೆಲ್ಲರಿಗೂ ಗುಮಾನಿಗೊಂಡ ಮಹೇಂದ್ರ ಕಂಡು ಬರಲು ಮೊದಲು ಅಗ್ನಿಯನ್ನು ಕಳುಹಿದ. ಯಕ್ಷನನ್ನು ಕಂಡವನೇ ಅಗ್ನಿರ್ಮಾಣವಕ ಯಕ್ಷನ ಮುಂದೆ ತನ್ನ ಬಿರುದು ಬಾವಳಿಗಳನ್ನು ಬಿಚ್ಚಿಟ್ಟು ಒಡ್ಡೋಲಗ ಮಾಡಿದ.

ಯಕ್ಷ ಕೇಳಿದ - ತಸ್ಮಿಂಸ್ತ್ವಯಿ ಕಿಂ ವೀರ್ಯಮಿತಿ. ನಿನ್ನ ಪರಾಕ್ರಮವೇನೆಂದು ಅಗ್ನಿಗೆ ಕೇಳಬೇಕಾ? ಮೊದಲೇ ಅಹಂಕಾರದಿಂದ ದಿಗಿಣ ಹಾಕುತ್ತಿದ್ದ ಅಗ್ನಿಗೆ ಯಕ್ಷ ಕೇಳಿದ್ದೇ ತಡವಾಯಿತು ಹೇಳಿಯೇ ಬಿಟ್ಟ.

ಅಖಿಲಾಂಡಕೋಟಿ ಬ್ರಹ್ಮಾಂಡವನ್ನೇ ಸುಟ್ಟು ಬೂದಿ ಮಾಡಿ ಬಿಡಬಲ್ಲೆ ಎಂದು. ತಸ್ಮೈ ತೃಣ ನಿದದೌ. ಯಕ್ಷ ಅಗ್ನಿಯ ಎದುರಿಗೆ ಹುಲ್ಲುಕಡ್ಡಿಯೊಂದನ್ನಿಟ್ಟು ಹೇಳಿತು ಏತದ್ದಹೇತಿ. ಇದನ್ನು ಸುಡು ಎಂದು.

ಅಗ್ನಿ ತಲೆಕೆಳಗೆ ಕಾಲು ಮೇಲೆ ಮಾಡಿದರೂ ಬಡಿದಾಡಿದರೂ ಆಗಲಿಲ್ಲ.

ಓ ಇದು ಏನೋ ಭಯಂಕರ ಇದೆ. ಈ ಯಕ್ಷ ಏನು ಸಾಮಾನ್ಯನಲ್ಲ. ನಂಗೋತ್ತಾಗುವುದಿಲ್ಲಪ್ಪಾ ಎನ್ನುತ್ತಾ ಅಗ್ನಿ ವಾಪಾಸ್ಸು ಹೋದ.

ನಂತರದ್ದು ಪ್ರಹವಾಯುವಿನದ್ದು ಪ್ರವೇಶ. ಕಥೆ ಸೇಮುಷ್ಠ ಜಗತ್ತನ್ನೇ ಉಡಾಯಿಸುತ್ತೇನೆಂದು ಬಡಾಯಿಕೊಚ್ಚಿಕೊಂಡವನಿಗೆ ತೃಣವನ್ನೂ ಹಂದಾಡಿಸಲಾಗಲಿಲ್ಲ. ಬಂದದಾರಿಗೆ ಸುಂಕವಿಲ್ಲವೆಂದು ಪ್ರವಹವಾಯು ವಾಪಾಸ್ಸು ಹೋದ ಮೇಲೆ ಕೊನೇಗೆ ಇಂದ್ರನೇ ಬಂದ.

ಆದರೆ ಈಗ ಯಕ್ಷ ಅಲ್ಲಿಲ್ಲ. ಮಾಯವಾಯ್ತು ಮಾತೆ ಉಮೆ ಆ ಸ್ಥಳದಲ್ಲಿ ಪ್ರತ್ಯಕ್ಷಳಾಗಿ ಯಕ್ಷಪ್ರಶ್ನೆಯನ್ನು ಬಿಡುಸುತ್ತಾಳೆ. ಮಹಾವಿಷ್ಣು ಕಳುಹಿಸಿದ ಪಾಠವನ್ನು ಕಲಿಸುತ್ತಾಳೆ. ವಿವರಿಸುತ್ತಾಳೆ.

ಅಲ್ಲಿಗೆ ಇಂದ್ರಾದಿ ದೇವತೆಗಳ ಅಹಂಕಾರವೆಲ್ಲಾ ಸೂರ್ಯ ಬಂದಾಗ ಹಿಮಕರಗಿದಂತೆ ಕರಗಿತು. ಗಟ್ಟಿಯಾಗಿದ್ದ ಅಹಂಕಾರ ನೀರಾಯ್ತು.

ತೇನ ವಿನಾ ತೃಣಮಪಿ ನ ಚಲತಿ ಎಂಬುದು ಸಾಕ್ಷಾತ್ಕೃತವಾಯಿತು. ಸೃಷ್ಟಿಯ ಕಟ್ಟಕಡೆಯ ಸೃಷ್ಟಿಯೇ ತೃಣ. ಆದ್ದರಿಂದಲೇ ಆ ಬ್ರಹ್ಮಸ್ತಂಬಪರ್ಯಂತಂ ದೇವರ್ಷಿಪಿತೃಮಾನವಾಃ ಎಂದು ಬ್ರಹ್ಮಾದಿತೃಣಾಂತ ಜೀವರಾಶಿಗೆ ತರ್ಪಣ ಎನ್ನುತ್ತಾ ಜಲ ತರ್ಪಣ ಕೊಡುವುದು.

ಸೀತಾದೇವಿಯೂ ರಾವಣನನ್ನು ತಿರಸ್ಕರಿಸಲು, ತೃಣೀಕರಿಸಲು ತೃಣವೊಂದನ್ನು ಮಧ್ಯೆ ಇಟ್ಟು ಮಾತಾಡಿದಳಂತೆ. 'ತೃಣಮಂತರತಃ ಕೃತ್ವಾ ಪ್ರತ್ಯುವಾಚ ಶುಚಿಸ್ಮಿತಾ'

ಶ್ರೀರಾಮನೂ ಖಗಾಃ ಮೃಗಾಃ ತೃಣಾದಯಃ ಎಂದು ತೃಣಾದಿ ಸಕಲ ಜೀವಾರಾಶಿಗಲಿಗೂ ಮೋಕ್ಷದ ಕೊಡುಗೆ ಕೊಟ್ಟದ್ದಂತೆ.

ಅಂತಹ ಅತ್ಯಂತ ಅಲ್ಪವಾದ ಸೃಷ್ಟಿಯ ಕಟ್ಟಕಡೆಯ ತೃಣವನ್ನೂ ಸುಡಲಾಗಲಿಲ್ಲ. ಎತ್ತಲಾಗಲಿಲ್ಲ ಎಂದಾಗ ದೇವತೆಗಳ ಆ ಅಹಂಕಾರ ಆವಿಯಾಗಿ ಹಾರಿಹೋಯಿತಂತೆ. ಇನ್ನು ಕಿಮುತ್ ಈ ಹುಲುಮಾನವರ ಕಥೆ? ನಮ್ಮಗಳ ಕಥೆ?

ಈ ರೀತಿ ಅಹಂಕಾರ ಕೇಶ ಬೆಳೆದಂತೆ ಕಳೆ ಬೆಳೆದಂತೆ ಎಲ್ಲರಲ್ಲೂ ಬೆಳೆಯುತ್ತಲೇ ಇರುತ್ತೆ. ಹೋದೆಯಾ ಎಂದರೆ ಬಂದೆ ಗವಾಕ್ಷಿಯೆಂದನ್ನುತ್ತದೆ.

ಅಹಂಕಾರವನ್ನು ಬಿಡುವುದು ಕಷ್ಟ. ಅದಕ್ಕೇ ಅದಕ್ಕೆ ಅಹಂಕಾರ ಎಂದು ಹೆಸರು. ಅಂದರೆ ಪೂರ್ಣ ಬಿಡಲಿಕ್ಕಾಗದ್ದು. ಅಹೇಯತ್ವಾತ್ ಅಹಂನಾಮಾ ಎಂದು. ಅಹಂಕಾರವನ್ನು ಬಿಟ್ಟರೂ ಅಹಂಕಾರವನ್ನು ಬಿಟ್ಟವ ಎನ್ನುವವ ಅಹಂಕಾರ ಬಂದೇ ಬರುತ್ತೆ.

ವಯಂಕಾರವೂ ಅಹಂಕಾರದ್ದೆ ಮತ್ತೊಂದು ವಿಸ್ತ್ರುತರೂಪ. ಸಮಷ್ಟಿರೂಪ. ಅಹಂಕಾರದ್ದೇ ಮತ್ತೊಂದು ಅಭಿವ್ಯಕ್ತಿ.

ಅಹಂಕಾರ ತಾನು ಮಾಡಿರಬಹುದಾದ ಅಲ್ಪವನ್ನೇ ಭೂಮವಾಗಿ ನಮ್ಮ ಮನಸ್ಸಿನಲ್ಲಿ ಮೂಡಿಸಿದರೆ, ಬಿತ್ತಿದರೆ ವಯಂಕಾರ ಬೇರೆಯವರು ಮಾಡಿದ್ದನ್ನೂ ಹೌದು ನಾನೇ ಮಾಡಿದ್ದು ಎಂದು ಸೇರಿಸಿ ತೋರಿಸುತ್ತದೆ. ಕಳೆದಷ್ಟು ಬೆಳೆಯುತ್ತಿರುತ್ತದೆ.

ಅಹಂಕಾರ ನಿರ್ಮೂಲನದ ಪ್ರಥಮಪ್ರಯತ್ನ ಅದು ತಾಯಿಯ ಕರ್ತವ್ಯ ಎಂಬುದರ ಸೂಚನೆಯೇ ಇಂದ್ರನಿಗೆ ಉಪದೇಶಿಸಲು ಬಂದ ತಾಯಿ ಉಮಾದೇವಿಯ ಅವತಾರದ ಸಂದೇಶ.

ತಾಯಂದಿರು ಮಕ್ಕಳಿಗೆ ಬಾಲ್ಯದಲ್ಲೇ ವಿನಯವನ್ನು ಕಲಿಸಬೇಕು. ವಿನಯವೇ ಶಿಕ್ಷಣದ ಮೂಲ ಪಾಠ ಮತ್ತು ಅಂತಿಮ ಫಲ ಕೂಡಾ. ವಿನಯದಿಂದಲೇ ಸಕಲ ಸಂಪತ್ತು ವಿದ್ಯಾ ದದಾತಿ ವಿನಯಂ, ವಿನಯಾದ್ಯಾತಿ ಪಾತ್ರತಾವ್ ಪಾತ್ರತ್ವಾದ್ಧನಮಾಪ್ನೋತಿ. ಧನಾದ್ಧರ್ಮಂ ತತಃ ಸುಖಮ್।

ವಿನಯವಿಲ್ಲದ ವಿದ್ಯೆ ಅದು ನೈವೇದ್ಯವಿದ್ಯೆ.

ಇಂದು ಭಾರತೀಯ ಸಂಸ್ಕೃತಿಯ ತಿರುಳಾದ ಅಹಂಕಾರದ ಉಪಮರ್ದನದ ಅಹಂಕಾರದ ಘೋಷಣೆಯ ಬದಲು ಅಮೇರಿಕೀಯ ಸಂಸ್ಕೃತಿಯಾದ ಅಹಂಕಾರದ ಉತ್ತೇಜನೆಯ ಪೋಷಣೆಯ ಶಿಕ್ಷಣ ನೀಡಲಾಗುತ್ತಿದೆ. ಹಾಗಾಗಿ ಭಾರತೀಯ ಕುಟುಂಬಗಳೂ ಇಂದು ಒಡೆದ ಮಡಕೆಯಾಗುತ್ತಿವೆ.

ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗೆ ಕೌಟುಂಬಿಕ ಸಾಮರಸ್ಯಕ್ಕೆ ಅಹಂಕಾರ ವಯಂಕಾರಗಳನ್ನು ಸಂಹಾರ ಮಾಡುವ, ಹೊಂದಾಣಿಕೆಯನ್ನು ಕಲಿಸುವ ಭಾರತೀಯ ಸಾಂಸ್ಕೃತಿಕ ಮೌಲ್ಯಗಳ ಹಿನ್ನಲೆಯುಳ್ಳ ಶಿಕ್ಷಣ ವ್ಯವಸ್ಥೆ ಬೇಕು.

ಇದುವೇ ತಲವಕಾರೋಪನಿಷತ್ತಿನ ಹಾಗೂ ಸುಂದರಕಾಂಡದ ಸುಂದರ ಸಂದೇಶ. ನಮಗೆ ಎಂದು ತಿಳಿಯಬೇಕು.

**ಅಮೇರಿಕಾದ ನ್ಯೂಜರ್ಸಿಯ ಶ್ರೀಕೃಷ್ಣ ಬೃಂದಾವನದಲ್ಲಿ ಉಡುಪಿ ಶ್ರೀ ಪುತ್ತಿಗೆ ಶ್ರೀಗಳು**
**ದೂರವಾಣಿ ವೆಬ್‌ಕ್ಲಾಸಿನ ಮೂಲಕ ನೀಡಿದ ತಲವಕಾರೋಪನಿಷತ್ ಮತ್ತು**
**ಸುಂದರಕಾಂಡ ಪಾಠಗಳ ಮಂಗಳಮಹೋತ್ಸವವನ್ನು ಚಾತುರ್ಮಾಸ್ಯ**
**ಮಂಗಳೋತ್ಸವದಂದು ನೆರವೇರಿಸುತ್ತಾ**
## ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು
**ನೀಡಿದ ಸಾರ ಸಂದೇಶ**